ನಿಗದಿತ ಪ್ರಮಾಣದಲ್ಲಿ ಗ್ರಾಮಸ್ಥರಿಗೆ ನೀಡುವುದರ ಮೂಲಕ ಮೂರು ಗ್ರಾಮಗಳಲ್ಲಿ ಯೋಜನೆಯು ಅನುಷ್ಠಾನವಾಗಿದೆ ಎಂದು ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿಯ ಮೂಲಕ ಘೋಷಿಸಲಾಗಿದೆ. ಮನೆಗೆ ಸಂಪರ್ಕಿಸಲಾದ ಪ್ರತಿ ನಳಕ್ಕೆ ಮೀಟರ್ ಕೂಡ ಅಳವಡಿಸಲಾಗಿದೆ. ಇದರಿಂದ ಗ್ರಾಮಗಳಲ್ಲಿ ನೀರು ವ್ಯರ್ಥವಾಗುವುದನ್ನು ತಡೆಯಲಾಗಿದೆ ಮತ್ತು ನಿಗದಿತ ಒತ್ತಡದಲ್ಲಿ ನೀರು ಸರಬರಾಜು ಆಗುತ್ತಿರುವುದರಿಂದ ನೀರಿನ ಸಮರ್ಪಕ ಬಳಕೆಯ ಜೊತೆಗೆ ಜಲ ಮೂಲಗಳ ಸಂರಕ್ಷಣೆಯನ್ನು ಮಾಡಲಾಗುತ್ತಿದೆ.

**ಶ್ರೀ ಪ್ರಕಾಶಗೌಡ ನಿಜನಗೌಡ ಪಾಟೀಲ,**
ಉಪಾಧ್ಯಕ್ಷರು,
ಗ್ರಾಮ ಪಂಚಾಯತ ಕುರುಬಗಟ್ಟಿ.

## ನರೇಗಾ ಮೂಲಕ ಸರ್ವಾಂಗಿಣ ಅಭಿವೃದ್ಧಿ ದುಡಿಯುವ ಕೈಗಳಿಗೆ ಕೆಲಸ...

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ಕುರುಬಗಟ್ಟಿ ಗ್ರಾಮ ಪಂಚಾಯತಿಯಲ್ಲಿ ಬರುವ ಮಂಗಳಗಟ್ಟಿ ಗ್ರಾಮದ ಹಣಿಪಟ್ಟಿ ಕೆರೆಯನ್ನು ಅಮೃತ ಗ್ರಾಮ ಪಂಚಾಯತ ಹಂತ-1 ರ ಕ್ರಿಯಾ ಯೋಜನೆಯಲ್ಲಿ ಅಳವಡಿಸಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗಿದ್ದು ಕೆರೆಯ ಪರಿಸರದ ನೈರ್ಮಲ್ಯ ಮತ್ತು ಸೌಂದರ್ಯವನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಗಿದೆ. ಈ ಕಾಮಗಾರಿಯನ್ನು ನಿರ್ಮಾಣ ಮಾಡಿದ ನಂತರ ರೈತರಿಗೆ ಹಾಗೂ ಜಾನುವಾರುಗಳಿಗೆ ಈ ಕೆರೆಯ ನೀರು ಜೀವಜಲವಾಗಿದೆ.

ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ವೈಯಕ್ತಿಕ ಕಾಮಗಾರಿಗಳಾದ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಬದು ನಿರ್ಮಾಣ, ಕೃಷಿಹೊಂಡಗಳು, ಮಾವಿನ ತೋಟಗಳು, ಪೌಷ್ಠಿಕ ತೋಟಗಳು, ಬಚ್ಚಲು ಗುಂಡಿಗಳು, ದನದ ಕೊಟ್ಟಿಗೆಗಳು, ಎರೆಹುಳು ಘಟಕಗಳು ಇತ್ಯಾದಿ ಮತ್ತು ಸಮುದಾಯ ಕಾಮಗಾರಿಗಳಾದ ಘನತ್ಯಾಜ್ಯ ನಿರ್ವಹಣಾ ಘಟಕ, ಕೆರೆಗಳ ಅಭಿವೃದ್ಧಿ, ಬೂದು ನೀರು ನಿರ್ವಹಣೆ, ಶಾಲಾ ಆಟದ ಮೈದಾನ ಅಭಿವೃದ್ಧಿ, ಶಾಲಾ ಶೌಚಾಲಯಗಳು, ಶಾಲಾ ಆವರಣ ಗೋಡೆಗಳ ನಿರ್ಮಾಣ, ರಸ್ತೆ ಸುಧಾರಣೆ ಕಾಮಗಾರಿಗಳು, ಚರಂಡಿ ಮತ್ತು ಸಿ.ಡಿ ನಿರ್ಮಾಣಗಳು, ಚೆಕ್ ಡ್ಯಾಂಗಳು, ಸ್ಮಶಾನ ಅಭಿವೃದ್ಧಿ ಕಾಮಗಾರಿಗಳು, ಕೊಳವೆ ಬಾವಿಗೆ ಮರು ಪೂರಣ ಘಟಕಗಳು, ಮಳೆ ನೀರು ಕೊಯ್ಲು ಕಾಮಗಾರಿಗಳು ಇತ್ಯಾದಿ ಕೆಲಸಗಳನ್ನು ಅನುಷ್ಠಾನ ಮಾಡುವ ಮೂಲಕ ಗ್ರಾಮೀಣ ಜನರಿಗೆ ಉದ್ಯೋಗ ನೀಡುವ ಮತ್ತು ಅದರ ಮೂಲಕ ದೂರಗಾಮಿ ಪರಿಣಾಮ ಬೀರುವ ಆಸ್ತಿಗಳನ್ನು ಸೃಜನೆ ಮಾಡಲಾಗುತ್ತಿದೆ.







**ಶ್ರೀ ಗಿರೀಶ್ ಕೋರಿ**
ಸಹಾಯಕ ನಿರ್ದೇಶಕರು(ಗ್ರಾಉ)
ತಾಲೂಕು ಪಂಚಾಯತ್ ಧಾರವಾಡ.



## ಬೂದು ನೀರಿನ ಸಂಸ್ಕರಣೆ......

ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾದ ಸ್ವಚ್ಛ ಭಾರತ ಮಿಷನ್(ಗ್ರಾ) ಯೋಜನೆಯು ಪ್ರತಿ ಹಳ್ಳಿಯು ಸಂಪೂರ್ಣ ಸ್ವಚ್ಛ ಪರಿಸರವನ್ನು ಹೊಂದುವ ಉದ್ದೇಶ ಹೊಂದಿದೆ. ಇದರ ಒಂದು ಭಾಗವಾಗಿ ಮನೆ-ಮನೆಗಳಿಂದ ಹೊರಬರುವ ಬೂದು ನೀರನ್ನು ಸಮರ್ಪಕ ನಿರ್ವಹಣೆ ಮಾಡುವ ಉದ್ದೇಶದಿಂದ ಬೂದು ನೀರು ನಿರ್ವಹಣೆ ಕಾಮಗಾರಿಗಳನ್ನು ಕುರುಬಗಟ್ಟಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಮೂರೂ ಗ್ರಾಮಗಳಲ್ಲಿ ಸಮುದಾಯ ಮಟ್ಟದ ಕಾಮಗಾರಿಗಳು ಮತ್ತು ಜಾಗೆ ಲಭ್ಯವಿರುವ ಮನೆಗಳ ಪಕ್ಕದಲ್ಲಿ ಇಂಗುಗುಂಡಿ ನಿರ್ಮಾಣ ಕಾಮಗಾರಿಗಳು ಚಾಲ್ತಿಯಲ್ಲಿವೆ. ಸ್ವಚ್ಛ ಭಾರತ ಮಿಷನ್(ಗ್ರಾ) ಹಾಗೂ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗಳ ಒಗ್ಗೂಡಿಸುವಿಕೆಯ ಅಡಿಯಲ್ಲಿ ಈ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.

ಈ ವಿಷಯಗಳನ್ನು ಗ್ರಾಮಸ್ಥರೊಂದಿಗೆ ಚರ್ಚಿಸಿದಾಗ ಧನಾತ್ಮಕ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಮೊದಲ ಹಂತದಲ್ಲಿ ಜಾಗದ ಲಭ್ಯತೆ ಇರುವ ಕುಟುಂಬಗಳು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 627 ವೈಯಕ್ತಿಕ ಇಂಗುಗುಂಡಿಗಳನ್ನು ನಿರ್ಮಿಸಿಕೊಂಡರು. ನಂತರ ಸಮುದಾಯ ಹಂತದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಇದರಿಂದ ಗ್ರಾಮದ ನೈರ್ಮಲ್ಯ ಹಾಗೂ ಶುಚಿತ್ವ ಕಾಪಾಡಲು ಅನುಕೂಲದ ಜೊತೆಗೆ ಅಂತರ್ಜಲ ಮಟ್ಟ ಹೆಚ್ಚಿಸುವುದಲ್ಲದೇ ಸಂಸ್ಕರಿಸಿದ ನೀರನ್ನು ಕೃಷಿ ಹಾಗೂ ಇತರೆ ಬಳಕೆಗೂ ಉಪಯೋಗಿಸಬಹುದಾಗಿದೆ.



**ಶ್ರೀಮತಿ ವಿದ್ಯಾಶ್ರೀ ಕನೋಜನವರ**
ತಾಂತ್ರಿಕ ಸಹಾಯಕರು
ಗ್ರಾಮ ಪಂಚಾಯತ್ ಕುರುಬಗಟ್ಟಿ

## ಸ್ವಚ್ಛ ಸಂಕೀರ್ಣದಲ್ಲಿ ಸರಳತೆ.....

ಕುರುಬಗಟ್ಟಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಮಂಗಳಗಟ್ಟಿ ಗ್ರಾಮದ ರಿಸನಂ. 152 ರಲ್ಲಿ ಮಾನ್ಯ ಜಿಲ್ಲಾಧಿಕಾರಿಅಂದ 10 ಗುಂಟೆ ಜಮೀನು ಘನ ತ್ಯಾಜ್ಯ ನಿರ್ವಹಣಾ ಘಟಕ ಸ್ಥಾಪಿಸಲು ಮಂಜೂರಾಗಿದೆ. ಈ ಜಾಗೆಯಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅಡಿಯಲ್ಲಿ ರೂ.12.00 ಲಕ್ಷ ವೆಚ್ಚದಲ್ಲಿ ಸ್ವಚ್ಛ ಸಂಕೀರ್ಣವನ್ನು ಗ್ರಾಮ ಪಂಚಾಯತಿ ವತಿಯಿಂದ ನಿರ್ಮಿಸಲಾಗಿದೆ ಹಾಗೆಯೇ ಪಕ್ಕದಲ್ಲಿ ಹಸಿ ಕಸ ನಿರ್ವಹಣೆ ಮಾಡಲು ಎರೆಹುಳು ಗೊಬ್ಬರ ತೊಟ್ಟಿಯನ್ನು ನಿರ್ಮಿಸಲಾಗಿದೆ.

ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟದ ಜೊತೆಗೆ ಗ್ರಾಮ ಪಂಚಾಯತಿಯು ಘನ ತ್ಯಾಜ್ಯ ನಿರ್ವಹಣೆಗಾಗಿ ಒಪ್ಪಂದ ಮಾಡಿಕೊಂಡಿದೆ. ಸಂಗ್ರಹಿಸಿ, ವಿಂಗಡಣೆ ಮಾಡಿದ ಮರುಬಳಕೆ ತ್ಯಾಜ್ಯವನ್ನು ಮಾರಾಟ ಮಾಡಿಕೊಳ್ಳಲು ಒಕ್ಕೂಟಕ್ಕೆ ಅವಕಾಶ ನೀಡಿದೆ. ಸ್ವಚ್ಛತಾ ಬಂಧುಗಳು ನಿರ್ವಹಣೆ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುತ್ತಿರುವುದು, ಜಿಲ್ಲೆಯ ಮತ್ತು ಪಕ್ಕದ ಬೆಳಗಾವಿ ಜಿಲ್ಲೆಯ ಗ್ರಾಮ ಪಂಚಾಯತಿಯ ಚುನಾಯಿತ ಜನಪ್ರತಿನಿಧಿಗಳು, ಹಿರಿಯ ಅಧಿಕಾರಿಗಳು, ಸ್ವ-ಸಹಾಯ ಸಂಘಗಳ ಮಹಿಳೆಯರು ಮತ್ತು ಆಸಕ್ತರು ಅಧ್ಯಯನಕ್ಕಾಗಿ ಕ್ಷೇತ್ರ ಭೇಟಿ ಮಾಡುತಿದ್ದಾರೆ.





**ಶ್ರೀ ಈರಣ್ಣ ನಬಾಪೂರೆ**
ಶುಚಿತ್ವ ಮತ್ತು ನೈರ್ಮಲ್ಯ ಸಮಾಲೋಚಕರು,
ಜಿಲ್ಲಾ ಪಂಚಾಯತ್ ಧಾರವಾಡ




# ಕರ್ನಾಟಕ ಸರಕಾರ
## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
## ಜಿಲ್ಲಾ ಪಂಚಾಯತ ಧಾರವಾಡ

# ಮಾತು ಕತೆ

ನಮ್ಮ ನಡೆ ಗ್ರಾಮದ ಕಡೆ...

**ಸಂಪುಟ : 01** **ಸಂಚಿಕೆ 01 : ಜನೇವರಿ 2023**







ಮಾಸ ಪತ್ರಿಕೆಯ ಪ್ರಕಟಣೆ
**ಗ್ರಾಮ ಪಂಚಾಯತ್ ಕುರುಬಗಟ್ಟಿ**

Dharwad Zilla Panchayat ZPDharwad

## ಕುರುಬಗಟ್ಟಿಯ ಮಾತುಕತೆ:



ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ತಳ ಮಟ್ಟದಲ್ಲಿ ಸ್ಥಳೀಯ ಸರ್ಕಾರವಾಗಿರುವ ಗ್ರಾಮ ಪಂಚಾಯತಿಗಳು ಪ್ರಜಾಪಭುತ್ವದ ತತ್ವಗಳ ಆಧಾರದ ಮೇಲೆ ರಚನೆಗೊಂಡಿದ್ದು, ಜನರ ಬೇಕು ಬೇಡಗಳಿಗೆ ಸ್ಪಂದಿಸಿ ಗ್ರಾಮಸ್ಥರ ದೈನಂದಿನ ಅವಶ್ಯಕತೆಗಳನ್ನು ಪೂರೈಸುವ ಜನರ ಅತೀ ಸಮೀಪದ ವಿಧಾನಸೌಧಗಳಾಗಿವೆ. ಅವುಗಳು ಕೇಂದ್ರ ಮತ್ತು ರಾಜ್ಯ ಸರಕಾರಗಳ ಅನೇಕ ಮಹತ್ವಾಕಾಂಕ್ಷಿ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನ ಮತ್ತು ಮೇಲ್ವಿಚಾರಣೆ ಮಾಡುತ್ತಿವೆ. ತಮ್ಮ ಗ್ರಾಮ ಪಂಚಾಯತಿಗಳಲ್ಲಿ ಕಾರ್ಯಗತ ಮಾಡಿದ ರಚನಾತ್ಮಕ ಕೆಲಸಗಳನ್ನು ಜನರ ಜೊತೆಗೆ "ಮಾತುಕತೆ" ಯ ಮೂಲಕ ಹಂಚಿಕೊಳ್ಳಬೇಕು ಮತ್ತು ಅದು ಚರ್ಚೆಗೊಳಪಡುವ ಧನಾತ್ಮಕವಾದ ಸಾಮಾಜಿಕ ಮಾಧ್ಯವಾಗಬೇಕೆಂಬುದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಶಯವಾಗಿದೆ.

ಧಾರವಾಡ ಜಿಲ್ಲೆಯ ಕುರುಬಗಟ್ಟಿ ಗ್ರಾಮ ಪಂಚಾಯತಿಯು ಜನಪ್ರತಿನಿಧಿಗಳ ಮತ್ತು ಸಿಬ್ಬಂದಿ ವರ್ಗದವರ ಸಮನ್ವಯದಿಂದ ಹಾಗೂ ತನ್ನ ವ್ಯಾಪ್ತಿಯ ಗ್ರಾಮಸ್ಥರ ಸಹಭಾಗಿತ್ವದಿಂದ ಅನೇಕ ಜನಹಿತ ಗ್ರಾಮೀಣಾಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತಾ ಜನರ ಆಶೋತ್ತರಗಳಿಗೆ ಸ್ಪಂದಿಸುತ್ತಿರುವುದು ಗಮನಾರ್ಹವಾಗಿದೆ.

ಈ ಗ್ರಾಮ ಪಂಚಾಯತಿಯ ಉತ್ತಮ ಕಾರ್ಯಗಳು, ಜನಪ್ರತಿನಿಧಿಗಳ ಹಾಗೂ ಗ್ರಾಮ ಪಂಚಾಯತಿಯ ಸಿಬ್ಬಂದಿ ವರ್ಗದವರ ಸಮೂಹವಾಗಿ ಕಾರ್ಯನಿರ್ವಹಿಸುವ ಪರಿ ಹಾಗೂ ಜನ ಸಮುದಾಯದ ಪಾಲ್ಗೊಳ್ಳುವಿಕೆ ಇನ್ನಿತರರಿಗೆ ಪ್ರೇರಣೆಯಾಗಲಿ ಮತ್ತು ಅವರು ಕೂಡಾ ಗ್ರಾಮೀಣ ಪ್ರದೇಶದ ಜನಹಿತದ ಕಾರ್ಯದಲ್ಲಿ ಕೈ ಜೋಡಿಸಿ ತನ್ಮೂಲಕ ಗ್ರಾಮೀಣ ಬದುಕು ಹಸನಾಗಿಸಲು ಸಾಧ್ಯವಾಗಲಿ ಎಂದು ಬಯಸುತ್ತೇನೆ.

"ಮಾತುಕತೆ"ಮಾಸ ಪತ್ರಿಕೆಯ ಪ್ರಥಮ ಸಂಚಿಕೆಗೆ ಶುಭ ಹಾರೈಸುತ್ತೇನೆ.

ಡಾ: ಸುರೇಶ ಇಟ್ನಾಳ ಭಾ.ಆ.ಸೇ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ ಧಾರವಾಡ

## ಗ್ರಾಮ ಮೂರು ಕಥೆಗಳು ಹಲವು...

ಕುರುಬಗಟ್ಟಿ ಗ್ರಾಮದಲ್ಲಿ ವ್ಯಾಸರಾಯರಿಂದ ಸ್ಥಾಪಿಸಲ್ಪಟ್ಟ ಹನುಮಂತ ದೇವರ ದೇವಸ್ಥಾನವಿದೆ. ಪ್ರತಿ ವರ್ಷ ದವನದ ಹುಣ್ಣಿಮೆಯಂದು ಮಹಾ ರಥೋತ್ಸವ ಜರುಗುತ್ತದೆ ಮತ್ತು ಈ ಉತ್ಸವವು 5 ದಿನಗಳ ವರೆಗೆ ಜರುಗುತ್ತದೆ. "ಪ್ರೀತಿಯ ಪಾರಿವಾಳ" ಖ್ಯಾತಿಯ ಜಾನಪದ ಕಲಾವಿದ ಶ್ರೀ ರಮೇಶ ಮಲ್ಲೇದಿ ಇವರು ನೂರಾರು ಹಾಡುಗಳನ್ನು ರಚಿಸಿ, ಹಾಡಿದ್ದಾರೆ. ಶ್ರೀ ಬಸವರಾಜ ಗುಡ್ಡಪ್ಪನವರ ಇವರು ಪ್ರಸಿದ್ಧ ಹಾಸ್ಯ ಕಲಾವಿದರಾಗಿದ್ದು, ಟಿವಿ ಚಾನಲ್‌ಗಳ ಕಾಮಿಡಿ ಶೋಗಳಲ್ಲಿ ಭಾಗವಹಿಸಿದ್ದಾರೆ.



ಮಂಗಳಗಟ್ಟಿ ಗ್ರಾಮದಲ್ಲಿ ಹಿಂದೆ ನಡೆದ ಧರ್ಮಸಭೆಯಲ್ಲಿ ಪಂಚಪೀಠಾಧೀಶ್ವರರು "ಈ ಗ್ರಾಮವು ಮಂಗಳಗಟ್ಟಿಯಲ್ಲ ಬಂಗಾರಗಟ್ಟಿ" ಎಂದು ಹೇಳಿದ್ದರು. ಚಿನ್ನದ ನಿಕ್ಷೇಪವು ಗ್ರಾಮದಲ್ಲಿ ಕಂಡು ಬಂದಿರುವುದು ವಿಶೇಷವಾಗಿದೆ. ಶ್ರೀ ರೇಣುಕಾಚಾರ್ಯರ ದೇವಸ್ಥಾನವು ಈ ಗ್ರಾಮದ ಪ್ರಮುಖ ಧಾರ್ಮಿಕ ಕೇಂದ್ರವಾಗಿದೆ.

ಮುಳಮುತ್ತಲ ಗ್ರಾಮದ ಪ್ರತಿ ವರ್ಷ ಹೋಳಿ ಹುಣ್ಣಿಮೆ ದಿನ ಕಾಮದಹನ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ.



ಗ್ರಾಮದ ಯುವಕ ತನ್ನ ಹೆಂಡತಿಗೆ ಬೆಳಗ್ಗೆ ಎದ್ದು ಊಟಕ್ಕೆ ಕೊಡು ಎಂದಾಗ ಹೆಂಡಿತಿಯು ನೀನೇನು ಇಷ್ಟು ಬೇಗ ಊಟ ಮಾಡಿ ಅಣ್ಣಿಗೇರಿಗೆ ಹೋಗಿ ಕಾಮಣ್ಣನ ರುಂಡ ತರುವೆಯಾ? ಎಂದಾಗ ಗಂಡನಿಗೆ ಸಿಟ್ಟು ಬಂದು ಮನೆಯಲ್ಲಿರುವ ಕುಡುಗೋಲು ತೆಗೆದುಕೊಂಡು ಅಣ್ಣಿಗೇರಿಗೆ ಹೋಗಿ ಕಾಮಣ್ಣನ ರುಂಡ ಕತ್ತರಿಸಿಕೊಂಡು ಬರುವಾಗ ಅಣ್ಣಿಗೇರಿಯ ಜನರು ಬೆನ್ನು ಹತ್ತಿದರು. ಮುಳಮುತ್ತಲ ಅಗಸಿ ಬಾಗಿಲು ತಲುಪಿದಾಗ ಮುಳ್ಳು ಕಾಲಿಗೆ ಚುಚ್ಚಿದನ್ನು ತೆಗೆದುಕೊಳ್ಳಲು ಸಾಧ್ಯವಾಗದೇ ಇದ್ದಾಗ ತನ್ನ ಕತ್ತನ್ನು ತಾನೇ ಕೊಯ್ದುಕೊಂಡು ಸತ್ತು ಹೋಗುತ್ತಾನೆ. ಅಂದಿನಿಂದ, ಕಾಮ ದಹನ ಕಾರ್ಯಕ್ರಮವು ಈ ಗ್ರಾಮದಲ್ಲಿ ಅತೀ ವಿಜೃಂಭಣೆಯಿಂದ ನಡೆಯುತ್ತದೆ. ಅಣ್ಣಿಗೇರಿ ಗ್ರಾಮದ ಜನರು ಮುಳಮುತ್ತಲ ಗ್ರಾಮದಲ್ಲಿ ಇದ್ದಾಗ ಕಾಮದಹನ ನಡೆಯುವುದಿಲ್ಲ, ಅವರನ್ನು ಊರಿನಿಂದ ಹೊರಕ್ಕೆ ಹಾಕಿದಾಗ ಮಾತ್ರ ಕಾಮಣ್ಣನ ರುಂಡಕ್ಕೆ ಬೆಂಕಿ ಹಚ್ಚುವುದು ಮತ್ತು ಕಾಮಣ್ಣನ ಮೂರ್ತಿಯ ರಕ್ಷಣೆಗಾಗಿ ಇಲ್ಲಿನ ಜನ ತಮ್ಮ ಕೈಯಲ್ಲಿ ಆಯುಧಗಳನ್ನು ಹಿಡಿದುಕೊಂಡು ಕಾಯುತ್ತಾರೆ. ಈ ಹಬ್ಬದಲ್ಲಿ ರಾಜ್ಯದ ವಿವಿಧ ಕಡೆಗಳಿಂದ ಲಕ್ಷಾಂತರ ಭಕ್ತರು ಬಂದು ತಮ್ಮ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳುತ್ತಾರೆ.

ಶ್ರೀಮತಿ ಬಸವಣ್ಣೆವ್ವ ಬಸವರಾಜ ಕರೇಸೀರಿ
ಅಧ್ಯಕ್ಷರು
ಗ್ರಾಮ ಪಂಚಾಯತ್ ಕುರುಬಗಟ್ಟಿ.

## ನಮ್ಮ ಸ್ವಚ್ಛತಾ ಬಂಧುಗಳು...

ಮಹಿಳೆಗೂ ಮತ್ತು ಸ್ವಚ್ಛತೆಗೂ ಬಿಡಿಸಲಾಗದ ನಂಟು ಮಹಿಳೆ ತನ್ನ ಮನೆಯಲ್ಲಿ ಮಾಡುವ ದಿನನಿತ್ಯದ ಕೆಲಸಗಳಲ್ಲಿ ಬಹು ಪಾಲು ಕೆಲಸಗಳು ಸ್ವಚ್ಛತೆಗೆ ಸಂಬಂಧಿಸಿದ್ದವುಗಳೇ ಆಗಿರುತ್ತವೆ. ಬೆಳಗ್ಗೆ ಮನೆಯಲ್ಲಿ ಕಸಗೂಡಿಸುವುದು, ಅಂಗಳಕ್ಕೆ ನೀರ್ಚೊಡೆದು ರಂಗವಲ್ಲಿ ಹಾಕುವುದು, ನೆಲ ತೊಳೆಯುವುದು, ದನದ ಕೊಟ್ಟಿಗೆಯನ್ನು ಸ್ವಚ್ಛಗೊಳಿಸುವುದು, ಆಹಾರ ಧಾನ್ಯಗಳಲ್ಲಿ ಹರಳು ಕಸ ತೆಗೆಯುವುದು, ಕಾಯಿಪಲ್ಯೆಗಳನ್ನು ಸ್ವಚ್ಛಗೊಳಿಸುವುದು, ಮುಸರೆ ಪಾತ್ರೆಗಳನ್ನು ತೊಳೆಯುವುದು, ಬಟ್ಟೆ ಒಗೆಯುವುದು, ಮಕ್ಕಳನ್ನು ಜಳಕ ಮಾಡಿಸುವುದು, ಹೊಲದಲ್ಲಿ ಕಳೆ ತೆಗೆಯುವುದು... ಇತ್ಯಾದಿ ಪ್ರತಿ ಕುಟುಂಬದ ಮಹಿಳೆಯರ ದಣಿವರಿಯದ ಈ ನಿರಂತರ ಸ್ವಚ್ಛತಾ ಕಾಯಕದಿಂದಲೇ ಇಡೀ ಕುಟುಂಬಕ್ಕೆ ಮನೆ ವಾಸಯೋಗ್ಯವೂ ಆರೋಗ್ಯ ಪೂರ್ಣವೂ ಆಗಿ ಸುಖ ಜೀವನಕ್ಕೆ ಕಾರಣವಾಗುತ್ತದೆ.

ಯಾವ ರೀತಿಯಾಗಿ ಒಂದು ಮನೆಯನ್ನು ಮಹಿಳೆ ಸ್ವಚ್ಛವಾಗಿಡುವಳೋ, ಅದೇ ತೆರನಾಗಿ ತನ್ನ ಗ್ರಾಮವನ್ನೂ ಕೂಡಾ ಕಸ ಮುಕ್ತ ಮಾಡಬಲ್ಲವಳಾಗಿದ್ದಾಳೆ ಎಂದು ನಮ್ಮ ಗ್ರಾಮ ಪಂಚಾಯತಿಯು ನಂಬಿದೆ ಆದ್ದರಿಂದ ಸ್ವಚ್ಛ ವಾಹಿನಿ ಮೂಲಕ ಮನೆ ಮನೆಗಳಿಂದ ಕಸ ಸಂಗ್ರಹ, ಸಾಗಣೆ ಮತ್ತು ಸಂಸ್ಕರಣೆ ಕುರುಬಗಟ್ಟಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಮಂಗಳಗಟ್ಟಿ ಗ್ರಾಮದಲ್ಲಿ ನಿರ್ಮಾಣವಾದ ಸ್ವಚ್ಛ ಸಂಕೀರ್ಣವನ್ನು ನಿರ್ವಹಣೆ ಮಾಡಲು ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಕ್ಕೆ ವಹಿಸಲಾಗಿದೆ. ಘನ ತ್ಯಾಜ್ಯದ ವೈಜ್ಞಾನಿಕ ನಿರ್ವಹಣೆ ಕುರಿತು ೦5 ದಿನಗಳ ತರಬೇತಿಯನ್ನು ಸ್ವ-ಸಹಾಯ ಸಂಘದ ಸದಸ್ಯೆಯರಾದ ಶ್ರೀಮತಿ ಕಮಲವ್ವ ಲಕ್ಷ್ಮಣ ಲಗಮವ್ವನವರ, ಶ್ರೀಮತಿ ಸಾವಕ್ಕ ಮಹಾಂತೇಶ ಹೊಸಮನಿ, ಶ್ರೀಮತಿ ಅಕ್ಕವ್ವ ಶಿವಪ್ಪ ಹೊಸಮನಿ ಇವರಿಗೆ ಜಿಲ್ಲಾ ಪಂಚಾಯತಿಯಿಂದ ತರಬೇತಿ ನೀಡಲಾಗಿದೆ, ವರ್ಷವಿಡಿ ಅವರಿಗೆ ಜೀವನೋಪಾಯ ತನ್ಮೂಲಕ ಆರ್ಥಿಕ ಮತ್ತು ಸಾಮಾಜಿಕ ಉನ್ನತಿ ದೊರೆತಿದೆ.



ಶ್ರೀ ಬಸವಲಿಂಗಯ್ಯ ಮೂಗನೂರಮಠ
ಯೋಜನಾ ನಿರ್ದೇಶಕರು,
ಜಿಲ್ಲಾ ಪಂಚಾಯತ ಧಾರವಾಡ



## ಗ್ರಂಥಾಲಯವೆಂದರೆ ಬರೀ ಪುಸ್ತಕದ ಮನೆಯಲ್ಲ...



ಕುರುಬಗಟ್ಟಿ ಗ್ರಾಮವು ಡಿಜಿಟಲ್ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರವನ್ನು ಹೊಂದಿದೆ. ಸದರಿ ಕೇಂದ್ರದಲ್ಲಿ ದಿನ ಪತ್ರಿಕೆಗಳು, ನಿಯತಕಾಲಿಕೆಗಳು ಮತ್ತು ಸ್ಪರ್ಧಾತ್ಮಕ ಪರೀಕ್ಷೆಯ ಪುಸ್ತಕಗಳು, ಕಥೆ, ಕಾದಂಬರಿ ಇನ್ನಿತರ ಹಲವಾರು ಪುಸ್ತಕಗಳು ಓದಲು ಲಭ್ಯವಿವೆ. ಯುವ ಸಮುದಾಯದ ಉಪಯೋಗಕ್ಕಾಗಿ ಗಣಕ ಯಂತ್ರಗಳು, ಟ್ಯಾಬ್ಲೆಟ್‌ಗಳು, ಟಿವಿ, ವೈಫೈಗಳನ್ನು ಅಳವಡಿಸಲಾಗಿದೆ ಸದರಿ ಕೇಂದ್ರಕ್ಕೆ ನಿರಂತರ ಬೆಳಕಿನ ವ್ಯವಸ್ಥೆಗಾಗಿ ಸೋಲಾರ ವಿದ್ಯುತ್ ವ್ಯವಸ್ಥೆಯನ್ನು ಒದಗಿಸಲಾಗಿದೆ.

ಈ ಡಿಜಿಟಲ್ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರದಲ್ಲಿ ಆನ್ ಲೈನ್ ಹಾಗೂ ಆಫ್ ಲೈನ್ ಸೇರಿ ೬೦೦ ಜನರು ಸದಸ್ಯತ್ವ ಹೊಂದಿರುತ್ತಾರೆ. ಸದರಿ ಮಾಹಿತಿ ಕೇಂದ್ರವನ್ನು ರೂಪಿಸಲು ಗ್ರಾಮ ಪಂಚಾಯತಿಯು ತನ್ನ 15ನೇ ಹಣಕಾಸು ಆಯೋಗದ ಸಿಫಾರಸ್ಸಿನ ಅನುದಾನ, ಸ್ವಂತ ಸಂಪನ್ಮೂಲವನ್ನು ಜೊತೆಗೆ ಶಿಕ್ಷಣ ಫೌಂಡೇಶನಂತಹ ಸರಕಾರೇತರ ಸಂಸ್ಥೆಯ ಸಹಯೋಗ ಪಡೆದುಕೊಳ್ಳಲಾಗಿದೆ. ಗ್ರಾಮಸ್ಥರು ಅದರಲ್ಲೂ ವಿಶೇಷವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳ ಆಕಾಂಕ್ಷಿಗಳು ಮತ್ತು ಮಕ್ಕಳಲ್ಲಿ ಓದುವ ಹವ್ಯಾಸ ರೂಢಿಸುವ ಉದ್ದೇಶದಿಂದ ಗ್ರಂಥಪಾಲಕರು ಸಾಯಂಕಾಲದವರೆಗೆ ಕೇಂದ್ರವನ್ನು ತೆರೆದು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕೇಂದ್ರದಲ್ಲಿ ಚೆಸ್ ಬೋರ್ಡ್, ಕೇರ್‌ಂ ಬೋರ್ಡ್‌ಗಳು ಮುಂತಾದ ಸಾಮಗ್ರಿಗಳು ಕೂಡ ಲಭ್ಯವಿವೆ.

ಶ್ರೀ ಚನ್ನಬಸಪ್ಪ ಧರೆಣ್ಣವರ್
ಪಂಚಾಯತ ಅಭಿವೃದ್ಧಿ ಅಧಿಕಾರಿ
ಗ್ರಾಮ ಪಂಚಾಯತ ಕುರುಬಗಟ್ಟಿ

## ಮನೆ ಮನೆಗೂ ಗಂಗೆ...



ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಮೂರು ಗ್ರಾಮಗಳ ಎಲ್ಲಾ 1659 ಕುಟುಂಬಗಳಿಗೂ ರೂ.279 ಲಕ್ಷಗಳ ವೆಚ್ಚದಲ್ಲಿ ಜಲ ಜೀವನ ಮಿಷನ್ ಯೋಜನೆಯ ಅಡಿಯಲ್ಲಿ ಹೊಸದಾಗಿ ನೀರು ಸರಬರಾಜು ಕೊಳವೆಗಳನ್ನು ಅಳವಡಿಸಿ ಶೇ.100ರಷ್ಟು ಮನೆಗಳಿಗೆ ಕಾರ್ಯಾತ್ಮಕ ನಲ್ಲಿ ನೀರಿನ ಸಂಪರ್ಕ ಅಳವಡಿಸಲಾಗಿದ್ದು, ಶುದ್ಧ ಹಾಗೂ ಸುರಕ್ಷಿತ ನೀರನ್ನು